# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

KANNADA POST

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 203 | Pages. 2 | Date: 21-06-2025, SATURDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 203 - ಪುಟಗಳು : 2 - 21 ಜೂನ್ 2025 ಶನಿವಾರ Ph: 8762954248 ದರ : ₹1


## ಹಾಸನ-ಚಿಕ್ಕಮಗಳೂರು ರೈಲು ಮಾರ್ಗ ಶೀಘ್ರ: ವಿ.ಸೋಮಣ್ಣ

### ಭಿನ್ನಮತೀಯರ ಸಭೆ ನಡೆದಿಲ್ಲ ಕಾಂಗ್ರೆಸ್ ಭ್ರಷ್ಟಾಚಾರದಲ್ಲಿ ಮುಳುಗಿದೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ಬೇಲೂರು-ಚಿಕ್ಕಮಗಳೂರು-ಕಡೂರು ರೈಲು ಮಾರ್ಗದ ಕಾಮಗಾರಿಯನ್ನು ಶೀಘ್ರಗತಿಯಲ್ಲಿ ಪೂರ್ಣಗೊಳಿಸಲು ಭೂ ಸ್ವಾಧೀನ ಪ್ರಕ್ರಿಯೆಯನ್ನು ತ್ವರಿತಗೊಳಿಸಿ, ಮೂರು ವರ್ಷಗಳಲ್ಲಿ ಕಾಮಗಾರಿ ಮುಗಿಸುವ ಗುರಿಯನ್ನು ರೈಲ್ವೆ ಇಲಾಖೆ ಹೊಂದಿದೆ ಎಂದು ಇಲಾಖೆಯ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಶುಕ್ರವಾರ ರೈಲ್ವೆ ಇಲಾಖೆಯ ಕಾಮಗಾರಿಗಳ ಪ್ರಗತಿ ಪರಿಶೀಲನೆ ನಡೆಸಿ, ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಹಾಸನ-ಬೇಲೂರು ರೈಲು ಮಾರ್ಗದ ಕಾಮಗಾರಿಯೂ ಶೀಘ್ರ ಆರಂಭವಾಗಲಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ರೈಲ್ವೆ ಕ್ರಾಂತಿ: ಸೋಮಣ್ಣ ಅವರು, ರಾಜ್ಯದಲ್ಲಿ ರೈಲ್ವೆ ಇಲಾಖೆಯಲ್ಲಿ ಹೊಸ ಕ್ರಾಂತಿಯಾಗುತ್ತಿದೆ ಎಂದು ಹೇಳಿದರು. ಯುಪಿಎ ಸರ್ಕಾರದ ಅವಧಿಯಲ್ಲಿ 850-900 ಕೋಟಿ ರೂ. ಅನುದಾನ ಬರುತ್ತಿದ್ದರೆ, ಈಗ 6,000-7,000 ಕೋಟಿ ರೂ. ಅನುದಾನ ಬರುತ್ತಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಹಭಾಗಿತ್ವದ ಯೋಜನೆಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಉತ್ತಮ ಸಹಕಾರ ಸಿಗುತ್ತಿದೆ ಎಂದು ತಿಳಿಸಿದರು.

ಕಾಂಗ್ರೆಸ್ ಶಾಸಕ ಬಿ.ಆರ್. ಪಾಟೀಲ್ ಅವರ ಆಡಿಯೊ ವಿಚಾರಕ್ಕೆ ಸಂಬಂಧಿಸಿ, ಸೋಮಣ್ಣ ಅವರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಶಾಸಕರೇ ಇಂತಹ ಆರೋಪ ಮಾಡಿದರೆ ಸರ್ಕಾರದ ನೈತಿಕತೆ ಏನು? ವಸತಿ ಸಚಿವ ಜಮೀರ್ ಅವರಿಗೆ ಸಲಹೆಯೆಂದರೆ, ಸುತ್ತಾಟ ಕಡಿಮೆ ಮಾಡಿ, ಕಚೇರಿಯಲ್ಲಿ ಕುಳಿತು ಬಡವರ ಸಮಸ್ಯೆ ಆಲಿಸಿ, ಎಂದು ಕಿಡಿಕಾರಿದರು. ಬಿ.ಆರ್. ಪಾಟೀಲ್ ಅವರಿಗೆ ಸರ್ಕಾರ ಎಚ್ಚೆತ್ತುಕೊಳ್ಳಲು ಕಾರಣವಾದಕ್ಕಾಗಿ ಅಭಿನಂದನೆ ಸಲ್ಲಿಸುತ್ತೇನೆ ಎಂದ ಅವರು, ಬಡವರ ಹೆಸರಿನಲ್ಲಿ ಹಣ ದುರ್ವಿನಿಯೋಗ ಮಾಡಿದರೆ ಭಗವಂತ ಕ್ಷಮಿಸಲ್ಲ, ಎಂದು ಎಚ್ಚರಿಸಿದರು.

**ಬಿಜೆಪಿಯಲ್ಲಿ ಬಂಡಾಯ ಚರ್ಚೆಗೆ ತಿರುಗೇಟು:**

ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಅವರ ಮನೆಯಲ್ಲಿ ಭಿನ್ನಮತೀಯರ ಸಭೆ ನಡೆದಿದೆ ಎಂಬ ಚರ್ಚೆಯನ್ನು ಸೋಮಣ್ಣ ಅಲ್ಲಗೆಳೆದರು. ಸಿದ್ದೇಶ್ವರ ಅವರ ಮಗನ ಮದುವೆ ಸಂಬಂಧ ಅವರನ್ನು ಭೇಟಿಯಾಗಲು ಹೋಗಿದ್ದೆ.

ಅದನ್ನು ಭಿನ್ನಮತ ಎಂದು ಬಿಂಬಿಸುವುದು ಸರಿಯಲ್ಲ. ಬಿಜೆಪಿ ನನಗೆ ತಾಯಿಯಂತೆ, ಸಿದ್ದೇಶ್ವರ ಅವರ ಕುಟುಂಬ ಪಕ್ಷದ ಅವಿಭಾಜ್ಯ ಅಂಗ, ಎಂದು ಸ್ಪಷ್ಟಪಡಿಸಿದರು. ಬಿಜೆಪಿ ರಾಜ್ಯಾಧ್ಯಕ್ಷ ಆಯ್ಕೆ ವಿಚಾರವನ್ನು ಕೇಂದ್ರ ನಾಯಕರಿಗೆ ಬಿಟ್ಟಿದ್ದಾರೆ ಎಂದರು.

ಕಾಂಗ್ರೆಸ್ ಸರ್ಕಾರದ ವಿರುದ್ಧ ಟೀಕೆ: ಕಾಂಗ್ರೆಸ್ ಸರ್ಕಾರವು ಎರಡು ವರ್ಷಗಳಲ್ಲಿ ಹಗರಣಗಳಲ್ಲಿ ಕಳೆದಿದೆ ಎಂದು ಸೋಮಣ್ಣ ಆರೋಪಿಸಿದರು. ಅಲ್ಪಸಂಖ್ಯಾತರಿಗೆ ಹೆಚ್ಚಿನ ಮೀಸಲಾತಿ, ಜಾತಿ ಗಣತಿ, ಕ್ಯಾಬಿನೆಟ್ ತೀರ್ಮಾನ ರದ್ದು ಇವೆಲ್ಲವೂ ಜನರ ಗಮನ ಬೇರೆಡೆಗೆ ಸೆಳೆಯುವ ಕಾಂಗ್ರೆಸ್‌ನ ತಂತ್ರ. ಅಭಿವೃದ್ಧಿಗೆ ಹಣವಿಲ್ಲ, ಮಳೆ-ನೆರೆಯ ನಂತರವೂ ಜನರಿಗೆ ನೆರವು ಸಿಗುತ್ತಿಲ್ಲ ಎಂದು ವಾಗ್ದಾಳಿ ನಡೆಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಶಾಸಕರಾದ ಸಿ.ಎನ್. ಬಾಲಕೃಷ್ಣ, ಸಿಮೆಂಟ್ ಮಂಜು, ಹೆಚ್.ಕೆ. ಸುರೇಶ್, ಮುಖಂಡರಾದ ಹೆಚ್.ಕೆ. ನಾಗೇಶ್, ಯೋಗೇಶ್, ಶ್ರೀಕಾಂತ್, ಅಮಿತ್ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

## ಜೂನ್ ನಲ್ಲೇ ಭರ್ತಿಯಾದ ದ್ವಾರಸಮುದ್ರ ಕೆರೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಳೇಬೀಡು: ಇಲ್ಲಿನ ಐತಿಹಾಸಿಕ ದ್ವಾರಸಮುದ್ರ ಕೆರೆ ಈ ಬಾರಿ ಮುಂಗಾರು ಪೂರ್ವ ಮಳೆಯಿಂದಾಗಿ ವಾಡಿಕೆಗೂ ಮುಂಚಿತವಾಗಿ ಭರ್ತಿಯಾಗಿದೆ.ಶುಕ್ರವಾರ ಮಧ್ಯಾಹ್ನ ಕೋಡಿಬಿತ್ತಿದೆ. ಸಾಮಾನ್ಯವಾಗಿ ಸೆಪ್ಟೆಂಬರ್ ಅಂತ್ಯಕ್ಕೆ ತುಂಬುವ ಕೆರೆ ಈ ವರ್ಷ ಜೂನ್ ಮಧ್ಯದಲ್ಲೇ ಭರ್ತಿಯಾಗಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ನೀರು ಹರಿದುಬಂದು ವರ್ಷವಿಡೀ ತುಂಬಿರುವ ನಿರೀಕ್ಷೆ ಮೂಡಿದೆ.

1000 ಎಕರೆ ವಿಸ್ತೀರ್ಣದ ರಾಷ್ಟ್ರಕೂಟರ ಕಾಲದ ಈ ಕೆರೆಯ ಏರಿ 2021ರಲ್ಲಿ ಬಿರುಕುಬಿಟ್ಟು ಕುಸಿದಿದ್ದರಿಂದ ಅಪಾರ ನೀರು ವ್ಯರ್ಥವಾಗಿತ್ತು. 2022ರಲ್ಲಿ ಏರಿ ದುರಸ್ತಿಯಾದ ಬಳಿಕ ಯಗಚಿ ಏತ ನೀರಾವರಿ ಯೋಜನೆಯ ಮೂಲಕ ಕೆರೆ ತುಂಬಿಸಲಾಗಿತ್ತು. ಈ ಬಾರಿ ಮೇ ತಿಂಗಳಿಂದಲೇ ಹಳ್ಳ-ಕೊಳ್ಳಗಳು ತುಂಬಿ ಅಪಾರ ನೀರು ಕೆರೆಗೆ ಹರಿದುಬಂದಿದೆ. ಸ್ಥಳೀಯರು ಗಂಗಾಪೂಜೆಗೆ ಸಿದ್ಧರಾಗಿದ್ದು, ರೈತರಲ್ಲಿ ಉತ್ಸಾಹ ಮನೆಮಾಡಿದೆ.

ಎತ್ತಿನಹೊಳೆ ಯೋಜನೆಯಡಿ ಸಕಲೇಶಪುರದಿಂದ ನಿರ್ಮಿತವಾದ ನಾಲೆಯು ಹಳೇಬೀಡು ಸಮೀಪದ ಅಡಗೂರು-ಐದಳ್ಳದ ಬಳಿ ಹಾದುಹೋಗುತ್ತದೆ. ಈ ನಾಲೆಗೆ ಸಮೀಪದ ಕಾಗೆದಳ್ಳದ ಮೂಲಕ ಕೆರೆಗೆ ನೀರು ಬರುತ್ತದೆ. ಐದಳ್ಳದ ಬಳಿಯ ನಾಲೆ ಕಾಮಗಾರಿ ಸ್ಥಗಿತಗೊಂಡಿರುವುದರಿಂದ ಗುಡ್ಡಗಳಿಂದ ಹರಿಯುವ ನೀರು ಶೇಖರಣೆಯಾಗಿ, ಕಾಗೆದಳ್ಳಕ್ಕೆ ಬಿಡಲಾಗುತ್ತಿದೆ. ಇದರಿಂದ ದ್ವಾರಸಮುದ್ರ ಕೆರೆಗೆ ಸಾಕಷ್ಟು ನೀರು ಹರಿದುಬರುತ್ತಿದ್ದು, ಇದು ಮುಂದೆ ಚಿಕ್ಕಮಗಳೂರು ಜಿಲ್ಲೆಯ ಬೆಳವಾಡಿ ಕೆರೆಯನ್ನು ಸೇರಿ, ವೇದಾವತಿ ಮಾರಿಕಣಿವೆ ಮೂಲಕ ವಾಣಿವಿಲಾಸ ಸಾಗರಕ್ಕೆ ತಲುಪಿ ಕೃಷ್ಣಾ ಜಲಾನಯನ ಪಾತ್ರಕ್ಕೆ ಸೇರುತ್ತದೆ.

ಕೆರೆ ಭರ್ತಿಯಿಂದ ಬಯಲುಸೀಮೆಯ ಸಾವಿರಾರು ಹೆಕ್ಟೇರ್ ಕೃಷಿಭೂಮಿಗೆ ಅನುಕೂಲವಾಗಿದ್ದು, ಕೃಷಿ ಚಟುವಟಿಕೆಗಳಿಗೆ ಉತ್ತೇಜನ ನೀಡಿದೆ.

## ತಡೆ ರಿಂಗುಗಳ ತೆರವಿಗೆ ಆಗ್ರಹಿಸಿ ಆಯುಕ್ತರಿಗೆ ಮನವಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ರಕ್ಷಣೆ ಬೇಲಿಗಳು ಮರದ ಬುಡ ಕಾಂಡದ ಒಳಗೆ ಸೇರಿಕೊಂಡಿದ್ದು ಮರದ ಬೆಳವಣಿಗೆಗೆ ತೊಂದರೆಯಾಗುತ್ತಿದ್ದು, ಈ ಒಂದು ತಡೆ ರಿಂಗುಗಳನ್ನು ತೆರವು ಮಾಡಿಕೊಡಬೇಕೆಂದು ಆಗ್ರಹಿಸಿ ಮಲೆನಾಡು ರಕ್ಷಣಾ ಸೇನೆ ಹಾಸನ ಜಿಲ್ಲಾ ಘಟಕದ ವತಿಯಿಂದ ನಗರದ ಸಂತೇಪೇಟೆ ವೃತ್ತದ ಬಳಿ ಇರುವ ಮಹಾನಗರ ಪಾಲಿಕೆಯ ಆಯುಕ್ತರಿಗೆ ಮನವಿ ಸಲ್ಲಿಸಲಾಯಿತು.

ಹಾಸನ ಮಹಾನಗರ ಪಾಲಿಕೆಯ ಆಯುಕ್ತರಿಗೆ ಹಾಸನ ಮಲೆನಾಡು ರಕ್ಷಣಾ ಸೇನೆಯ ಜಿಲ್ಲಾಧ್ಯಕ್ಷರಾದ ದರ್ಶನ್ ಮಲ್ನಾಡ್ ಮಾತನಾಡಿ, ನಗರದಲ್ಲಿ ಹಲವಾರು ವರ್ಷಗಳಿಂದ ಹಾಸನ ನಗರದ ಸೌಂದರ್ಯ ಹೆಚ್ಚಿಸುವ ಉದ್ದೇಶ ಹಾಗೂ ಪರಿಸರದ ಕಾಳಜಿಯಿಂದ ಸ್ವಚ್ಛ ಭಾರತ್ ಮಿಷನ್ ಹಾಗೂ ಹಲವಾರು ಯೋಜನೆಗಳ ಮುಖಾಂತರ ಹಾಸನದ ಪ್ರಮುಖ ರಸ್ತೆಗಳು ಹಾಗೂ ಹಾಸನ ನಗರ ಬಡಾವಣೆಯ ರಸ್ತೆಗಳಲ್ಲಿ ಸಾಲುಮರಗಳನ್ನು ನೆಟ್ಟಿದ್ದು, ಈ ಒಂದು ಗಿಡಗಳ ರಕ್ಷಣೆಗೆ ರಕ್ಷಣಾ ಬೇಲಿಯನ್ನು ಹಾಕಲಾಗಿತ್ತು ಎಂದರು. ಈಗ ಆ ಮರಗಳು ಈಗ ಹೆಮ್ಮರವಾಗಿ ಬೆಳೆದಿದ್ದು, ಆ ರಕ್ಷಣೆ ಬೇಲಿಗಳು ಮರದ ಬುಡ ಕಾಂಡದ ಒಳಗೆ ಸೇರಿಕೊಂಡಿದ್ದು ಮರದ ಬೆಳವಣಿಗೆಗೆ ತೊಂದರೆಯಾಗುತ್ತಿದ್ದು, ಈ ಒಂದು ತಡೆ ರಿಂಗುಗಳನ್ನು ತೆರವು ಮಾಡಿಕೊಡಬೇಕೆಂದು ಹಾಸನ ಮಹಾನಗರ ಪಾಲಿಕೆಯ ಆಯುಕ್ತರಿಗೆ ಮನವಿ ಸಲ್ಲಿಸಲಾಯಿತು.

## ಭೂಸ್ವಾಧೀನ ವಿರೋಧಿಸಿ ಜೂ.25ಕ್ಕೆ ದೇವನಹಳ್ಳಿ ಚಲೋ ಕರೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಹಾಸನ: ಬಲವಂತದ ಹಾಗೂ ಅನ್ಯಾಯದ ಭೂಸ್ವಾಧೀನ ವಿರೋಧಿಸಿ ಜೂನ್-25 ರಂದು ದೇವನಹಳ್ಳಿ ಚಲೋ ಕರೆ ಕೊಟ್ಟಿರುವುದಾಗಿ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯ 13 ಗ್ರಾಮಗಳ ಸುಮಾರು 1777 ಎಕರೆ ಫಲವತ್ತಾದ ಭೂಮಿಯನ್ನು ಬಲವಂತವಾಗಿ ಕೆ.ಐ.ಎ.ಡಿ.ಬಿ ಸ್ವಾಧೀನಾ ಪಡಿಸಿಕೊಳ್ಳಲು ಮುಂದಾಗಿರುವುದನ್ನು ವಿರೋಧಿಸಿ ಸಂಯುಕ್ತ ಹೋರಾಟ - ಕರ್ನಾಟಕ ಈ ತಿಂಗಳ 25 ರಂದು ದೇವನಹಳ್ಳಿ ಚಲೋಗೆ ಕರೆ ನೀಡಿದೆ. ಕಳೆದ 182 ದಿನಗಳಿಂದ ರೈತರು ಭೂ ಸ್ವಾಧೀನಕ್ಕೆ ತಮ್ಮ ಅಸಮ್ಮತಿ ಸೂಚಿಸಿ ಅಧಿಸೂಚನೆ ಕೈಬಿಡುವಂತೆ ಹೋರಾಟವನ್ನು ನಿರಂತರವಾಗಿ ನಡೆಸುತ್ತಿದ್ದು, ಕಳೆದ ಬಿ.ಜೆ.ಪಿ ಸರ್ಕಾರ ಸ್ವಾಧೀನಪಡಿಸಿಕೊಳ್ಳಲು ಕೆ.ಐ.ಎ.ಡಿ.ಬಿ ಕಾಯಿದೆ ಕಲಂ 28(1)ರ ಪ್ರಕಾರ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿದಾಗ ಇದನ್ನು ವಿರೋಧಿಸಿ ಆ ಭಾಗದ ರೈತರು ಪ್ರತಿಭಟನೆ ಸತ್ಯಾಗ್ರಹವನ್ನು ಪ್ರಾರಂಭಿಸಿದಾಗ ಆಗ ವಿರೋಧ ಪಕ್ಷದ ನಾಯಕರಾಗಿದ್ದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯರವರು ಮತ್ತು ಕಾಂಗ್ರೆಸ್ ಪಕ್ಷದ ಹಲವಾರು ಮುಖಂಡರು ಈ ಹೋರಾಟವನ್ನು ಬೆಂಬಲಿಸಿ.

ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಬಲತ್ಕಾರ ಭೂ ಸ್ವಾಧೀನಕ್ಕೆ ಅವಕಾಶ ನೀಡುವುದಿಲ್ಲವೆಂದು ಇದನ್ನು ರದ್ದುಪಡಿಸುವುದಾಗಿ ಬಹಿರಂಗವಾಗಿ ಹೇಳಿ, ಅಧಿಕಾರಕ್ಕೆ ಬಂದ ನಂತರ ಬಿ.ಜೆ.ಪಿ ಸರ್ಕಾರ ತಂದಿದ್ದ. ಅಧಿಸೂಚನೆಯನ್ನು ಮುಂದುವರೆಸಿ ಕಾಯಿದೆ ಕಲಂ 28(4)ರ ರಿತ್ಯಾ ಅಂತಿಮ ಅಧಿಸೂಚನೆ ಹೊರಡಿಸಿ ಕೊಟ್ಟ ಮಾತಿಗೆ ತಪ್ಪಿದೆ. ಅಷ್ಟೆ ಅಲ್ಲ ಯು.ಪಿ.ಎ ಸರ್ಕಾರ ತಂದಿರುವ 2013ರ ಭೂ ಸ್ವಾಧೀನ ಕಾಯಿದೆಗೆ ವ್ಯತಿರಿಕ್ತವಾಗಿ ನಡೆದುಕೊಂಡು ಬಲತ್ಕಾರವಾಗಿ ಸ್ವಾಧೀನಪಡಿಸಿಕೊಳ್ಳಲು ಮುಂದಾಗಿದೆ. ಇದು ರೈತರಿಗೆ ಮಾಡಿದ ದ್ರೋಹವಾಗಿದೆ ಎಂದು ದೂರಿದರು.

ಮಾತಿಗೆ ತಪ್ಪಿದ ಸರ್ಕಾರದ ನೀತಿಯನ್ನು ಖಂಡಿಸಿ. ಭೂ ಸ್ವಾಧೀನವನ್ನು ಕೈ ಬಿಡಲೇಬೆಕೆಂದು ಆಗ್ರಹಿಸಿ 25 ರಂದು ಹಮ್ಮಿಕೊಂಡಿರುವ ದೇವನಹಳ್ಳಿ ಚಲೋ ಕಾರ್ಯಕ್ರಮದಲ್ಲಿ ರೈತ, ದಲಿತ, ಕಾರ್ಮಿಕ, ಮಹಿಳಾ, ಯುವಜನ ವಿಧ್ಯಾರ್ಥಿ ಚಳುವಳಿಗಾರರು ಅಲ್ಲದೇ ಪ್ರಗತಿ ಪರ ಹೋರಾಟಗಾರರು. ಸಾಹಿತಿ ಕಲಾವಿಧರು ರಾಜ್ಯದ ಮೂಲೆ ಮೂಲೆಗಳಿಂದಲೂ ದೇವನಹಳ್ಳಿಗೆ ಬಂದು ತಹಶೀಲ್ದಾರ್ ಕಛೇರಿಯ ಮುಂದೆ ಪ್ರತಿಭಟಿಸಲಿದ್ದು, ಅನಿರ್ಧಿಷ್ಟ ಕಾಲ ಅಹೋರಾತ್ರಿ ಧರಣಿಯನ್ನು ಮುಂದುವರೆಸಲಿದ್ದಾರೆ. ಎಂದರು.

ಕಾವೇರಿ ಆರತಿ ಬೇಡ - ಅಮ್ಯೂಸ್ ಮೆಂಟ್ ಪಾರ್ಕ್ ಬೇಡವೇ ಬೇಡ. 92 ಕೋಟಿ ರೂ. ವೆಚ್ಚ ಮಾಡಿ ಕಾವೇರಿ ಆರತಿ ಎಂಬ ಅರ್ಥಹೀನ ಕಾರ್ಯಕ್ರಮವನ್ನು ಸರ್ಕಾರ ನಡೆಸಲು ಮುಂದಾಗಿರುವುದನ್ನು ಸಂಘವು ವಿರೋಧ ಮಾಡುತ್ತಿದ್ದು, ಈ ಮೌಢ್ಯದ ಕಾರ್ಯಕ್ರಮವನ್ನು ಸರ್ಕಾರ ಕೂಡಲೇ ಕೈಬಿಡಬೇಕೆಂದು ಒತ್ತಾಯಿಸುತ್ತದೆ.

ಕನ್ನಂಬಾಡಿ ಕಟ್ಟೆ ನಿರ್ಮಾಣವಾಗಿ 90 ವರ್ಷಗಳಾಗುತ್ತಿದೆ. ಸಾರ್ವಜನಿಕವಾಗಿ ಅಭಿಪ್ರಾಯವನ್ನು ಸಂಗ್ರಹಿಸಿದೇ ಕಾನೂನು ಕ್ರಮಗಳನ್ನು ಅನುಸರಿಸದೇ ಕೆ.ಆರ್.ಎಸ್‌ನಲ್ಲಿ ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಾಣ ಮಾಡುವ ಸರ್ಕಾರದ ಕ್ರಮ ಜನ ವಿರೋಧಿಯಾಗಿದೆ ಎಂದರು.

## ಇವೆಂಟ್ಸ್ ಲೋಕದಲ್ಲಿ ಹಾಸನದ 'ಧ್ರುವ' ತಾರೆ

### ಸವಾಲಿನ ಇವೆಂಟ್ಸ್ ಮ್ಯಾನೇಜ್ಮೆಂಟ್ ನಲ್ಲಿ ಅಪ್ರತಿಮ ಹೆಜ್ಜೆ ಗುರುತು : ಸಮಾಜ ಸೇವೆಯಿಂದಲೂ ಜನ ಮನ್ನಣೆ

**ಕನ್ನಡ ಪೋಸ್ಟ್ ವಿಶೇಷ**

ಜೀವನದಲ್ಲಿ ಅಂದುಕೊಂಡದ್ದನ್ನು ಸಾಧಿಸಬೇಕೆಂದರೆ ನಿರಂತರ ಪ್ರಯತ್ನ, ಪರಿಶ್ರಮ ಹಾಗೂ ತಾಳ್ಮೆ ಇರಬೇಕು. ನಾವು ಮಾಡುವ ಕಾಯಕದಲ್ಲಿ ಶ್ರದ್ಧೆ ಇದ್ದರೆ ಯಶಸ್ಸು ನಮ್ಮನ್ನು ಅರಸಿ ಬರುತ್ತದೆ ಎನ್ನುವುದಕ್ಕೆ ಹೆಚ್.ಪಿ. ಧ್ರುವಕುಮಾರ್ ಸಾಕ್ಷಿಯಾಗಿದ್ದಾರೆ.

ಧ್ರುವ ಇವೆಂಟ್ಸ್ ಮೂಲಕ ಮನೆಮಾತಾಗಿರುವ ಧ್ರುವ ಕುಮಾರ್ ಜೀವನದ ಯಶೋಗಾಥೆ ತಿಳಿದರೆ ಸಾಮಾನ್ಯರು ಅಸಾಮಾನ್ಯವಾದುದನ್ನು ಸಾಧಿಸಬಹುದು ಎನಿಸುತ್ತದೆ.

ಓದಿದ್ದು ಎಂಜಿನಿಯರಿಂಗ್ ಕೈತುಂಬಾ ಸಂಬಳದ ಕೆಲಸವಿದ್ದರೂ ಅಷ್ಟಕ್ಕೆ ತೃಪ್ತರಾಗದ ಅವರು ಸ್ವಂತ ಉದ್ಯಮದ ಮೂಲಕ ಸ್ವಾವಲಂಬಿ ಬದುಕು ಕಟ್ಟಿಕೊಂಡಿರುವುದು ಮಾತ್ರವಲ್ಲದೆ ಹಲವರಿಗೆ ಉದ್ಯೋಗದಾತರು ಆಗಿದ್ದಾರೆ.

ಅವರ ಪರಿಶ್ರಮಕ್ಕೆ ಪ್ರತಿಫಲ ಎನ್ನಲು ಸಾಕ್ಷಿಗುಡ್ಡೆಗಳನ್ನು ನೋಡಬಹುದು. ಪ್ರಸ್ತುತ ದಿನಗಳಲ್ಲಿ ಇವೆಂಟ್ ಮ್ಯಾನೇಜ್ಮೆಂಟ್ ಎಂಬುದು ಬಹುಬೇಡಿಕೆಯ ಕ್ಷೇತ್ರವಾಗಿದೆ. ದುಡ್ಡಿರುವ ಯಾರು ಬೇಕಾದರೂ ಬಂಡವಾಳ ಹಾಕಿ ಇವೆಂಟ್ಸ್ ತೆರೆದು ಆರಂಭದ ಶೂರತ್ವ ಎಂಬಂತೆ ಕೆಲಸ ಮಾಡಬಹುದು. ಆದರೆ ಹಿಡಿದ ಕೆಲಸ ಹಲವರ ಮೆಚ್ಚುಗೆಗೆ ಪಾತ್ರವಾಗಿದೆ ಎಂದರೆ ಅದು ಸಾಧ್ಯೆಯೇ ಸರಿ. ಆ ಪರಿಶ್ರಮವೇ ಧ್ರುವಕುಮಾರ್ ಅವರನ್ನು ಅಂತಾರಾಷ್ಟ್ರೀಯ ಮಟ್ಟದ ಕಾರ್ಯಕ್ರಮಗಳಿಗೂ ಕೈಬೀಸಿ ಕರೆಯುತ್ತಿರುವುದು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕರುನಾಡ ಚಕ್ರವರ್ತಿ ಡಾ. ಶಿವರಾಜ್ ಕುಮಾರ್, ಶಾಸಕ ಜನಾರ್ದನ ರೆಡ್ಡಿ ಅವರ ಮಕ್ಕಳ, ರಾಕಿಂಗ್ ಸ್ಟಾರ್ ಯಶ್, ಡಾಲಿ ಧನಂಜಯ, ಧ್ರುವ ಸರ್ಜಾ ಅವರ ಮದುವೆ ಸಮಾರಂಭದ ಇವೆಂಟ್ಸ್ ರೂಪಿಸಿದ್ದು ಇದೇ ಹೆಚ್.ಪಿ. ಧ್ರುವಕುಮಾರ್.

ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಚ್ಚುಕಟ್ಟು ವೇದಿಕೆ, ಅಲಂಕಾರ, ಸೌಂಡ್ ಸಿಸ್ಟಂ ಮೂಲಕ ಸಾಹಿತ್ಯ ಪ್ರೇಮಿಗಳ ಮೆಚ್ಚುಗೆಗೂ ಪಾತ್ರರಾಗಿದ್ದಾರೆ.



### ಸುಲಭದ ಕೆಲಸವಲ್ಲ ಇವೆಂಟ್ಸ್

ಯಾವುದೇ ಕುಟುಂಬ, ಸರ್ಕಾರ ಅಥವಾ ಸಂಸ್ಥೆಗಳು ಹಮ್ಮಿಕೊಳ್ಳುವ ಕಾರ್ಯಕ್ರಮಗಳು ಯಶಸ್ಸು ಕಾಣುವುದು ಭವ್ಯ ವೇದಿಕೆ, ಸೌಂಡ್, ಲೈಟಿಂಗ್, ಅದ್ದೂರಿ ಪ್ರದರ್ಶನದಿಂದ ಎಂಬುದು ಗೊತ್ತಿರುವ ವಿಚಾರ. ಕಾರ್ಯಕ್ರಮ ಆರಂಭವಾದಾಗಿನಿಂದ ಮುಗಿಯುವ ವರೆಗೆ ಯಾವುದೇ ಅಡೆತಡೆಯಾಗದಂತೆ ನೋಡಿಕೊಳ್ಳುವುದು ಮುಖ್ಯಸ್ಥರ ಜವಾಬ್ದಾರಿ. ಈ ಕೆಲಸವು ಸಾಕಷ್ಟು ತಾಳ್ಮೆ, ಸಂಯಮ ಹಾಗೂ ಸೇವಾ ಮನೋಭಾವ ಬೇಡುತ್ತದೆ. ಇವೆಂಟ್ಸ್ ಮ್ಯಾನೇಜ್ ಮೆಂಟ್ ಪ್ರತಿದಿನವೂ ಸವಾಲಿನ ಕೆಲಸವೇ ಆಗಿದ್ದು ಈ ಅಗ್ನಿ ಪರೀಕ್ಷೆಯಲ್ಲಿ ಧ್ರುವ ಅವರು ಯಶಸ್ಸು ಸಾಧಿಸುತ್ತಿದ್ದಾರೆ.

### ತಂದೆಯಿಂದ ಬಂದ ಬಳುವಳಿ

ಹಾಸನದ ಮಲೆನಾಡು ಎಂಜಿನೀಯರಿಂಗ್ ಕಾಲೇಜಿನಲ್ಲಿ ಬಿಇ ಪದವಿ ಪಡೆದಿರುವ ಧ್ರುವ ಅವರು ಬೆಂಗಳೂರಿನ ಕನ್ ಸ್ಟ್ರಕ್ಷನ್ ಕಂಪನಿಯಲ್ಲಿ ನಾಲ್ಕು ವರ್ಷ ಕೆಲಸ ಮಾಡಿದ್ದಾರೆ. ನಂತರ ಉದ್ಯೋಗಿ ಬದಲು ಉದ್ಯೋಗತಾನಾಗುವ ಕನಸು ಚಿಗುರೊಡೆದು ಕೆಲಸಕ್ಕೆ ವಿದಾಯ ಹೇಳುತ್ತಾರೆ. ತಂದೆ ಪ್ರಕಾಶ್ ಬೆಂಗಳೂರಿನಲ್ಲಿ ರಶ್ಮಿ ಸ್ಟುಡಿಯೋ ಮೂಲಕ ಫೋಟೋಗ್ರಾಫರ್ ವೃತ್ತಿಯಲ್ಲಿದ್ದು ಧ್ರುವ ಅವರಿಗೆ ಕಾಂಟ್ಯಾಕ್ಟ್ ಬೆಳೆಯಲು ಹಾಗೂ ವಿವಾಹ ಆಯೋಜನೆಗೆ ತರಬೇತಿಗೊಳ್ಳಲು ಸಾಧ್ಯವಾಯಿತು ಎನ್ನಬಹುದು. ಧ್ರುವ ಅವರು ಇವತ್ತು ಯಶಸ್ವಿ ಉದ್ಯಮಿ ಎನಿಸಿಕೊಳ್ಳಲು ತಂದೆಯ ಕಾಣಿಕೆ ಹೆಚ್ಚಿದೆ. ಜೊತೆಗೆ ತಾಯಿ ಮಂಜುಳಾ ಅವರು ಪುತ್ರನ ಏಳಿಗೆಗಾಗಿ ಸಹಾಯ ಮಾಡುತ್ತಿದ್ದಾರೆ.






### ಮಲೇಷ್ಯಾ ಐಕಾನಿಕ್ ಅವಾರ್ಡ್

ವೆಡ್ಡಿಂಗ್ಸ್ ಬೈ ಧ್ರುವ ಸಂಸ್ಥಾಪಕ ಮತ್ತು ನಿರ್ದೇಶಕ ಶ್ರೀ ಧ್ರುವ ಕುಮಾರ್ ಎಚ್.ಪಿ. ಅವರು ಮಲೇಷ್ಯಾ ಇಂಡಿಯಾ ಐಕಾನಿಕ್ ಅವಾರ್ಡ್ಸ್ 2024ರ ಪ್ರತಿಷ್ಠಿತ ಪ್ರಶಸ್ತಿಯನ್ನು ಸ್ವೀಕರಿಸಿದ ಗೌರವಕ್ಕೆ ಪಾತ್ರರಾಗಿದ್ದಾರೆ. ಈ ಗೌರವಕ್ಕೆ ಆಯ್ಕೆಯಾದ ಕೇವಲ 26 ವ್ಯಕ್ತಿಗಳಲ್ಲಿ ಅವರೂ ಒಬ್ಬರು.



### ಸಮಾಜ ಸೇವೆಯ ತುಡಿತ

ಇವೆಂಟ್ಸ್ ಮ್ಯಾನೆಜ್‌ಮೆಂಟ್ ಮೂಲಕ ಉದ್ಯಮಿಯಾಗಿ ಬೆಳೆಯುತ್ತಿರುವ ಧ್ರುವ ಅವರಿಗೆ ಹಣ ಗಳಿಕೆಯೊಂದೆ ಉದ್ದೇಶವಲ್ಲ. ದುಡಿದಿದ್ದರಲ್ಲಿ ಸಮಾಜ ಸೇವೆಗೂ ಮುಡಿಪಾಗಿಡಬೇಕೆಂದು ಬಯಸುವವರು. ಸಮಾಜ ಸೇವೆ ಹೆಸರಿನಲ್ಲಿ ಪ್ರಚಾರ ತೆಗೆದುಕೊಳ್ಳಬೇಕೆಂಬ ದುರಾಸೆಯೂ ಅವರಿಗಿಲ್ಲ. ಎಡಗೈಯಲ್ಲಿ ಕೊಟ್ಟಿದ್ದು ಬಲಗೈಗೆ ಗೊತ್ತಾಗಬಾರದು ಎಂದು ಪರೋಪಕಾರಿಯಾಗಿದ್ದಾರೆ. ಅವರ ಭವಿಷ್ಯ ಉಜ್ವಲವಾಗಿರಲಿ ಎಂದು ಶುಭ ಹಾರೈಸೋಣ.


WEDDINGS BY Dhruva

